ಶ್ರೀ ವೈ. ರಾಮಕೃಷ್ಣ : ಮಾನ್ಯ ಸಭಾಪತಿಗಳೇ, ಈ ರಾಜ್ಯದಲ್ಲಿ ಸರ್ಕಾರದ ಆಸ್ಪತ್ರೆಗಳಲ್ಲಿ ಗ್ಲೂಕೋಸ್‌ನ್ನು ತಯಾರು ಮಾಡತಕ್ಕಂತಹ ಎಷ್ಟು ಘಟಕಗಳು ಇವೆ? ಅಲ್ಲಿ ತಯಾರು ಆಗತಕ್ಕಂಥ ಗ್ಲೂಕೋಸ್ ಬೆಲೆ ಮಾರ್ಕೆಟ್ ಬೆಲೆಗಿಂತ ಜಾಸ್ತಿ ಇದೆಯೇ ಎನ್ನುವುದನ್ನು ತಿಳಿಸಿ.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೇ ಸುಮಾರು 14 ಇರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾವು ಹೊರಗಡೆ ತೆಗೆದುಕೊಳ್ಳುವುದಕ್ಕಿಂತ ನಾವು ಸರ್ಕಾರದಲ್ಲಿ ತಯಾರು ಮಾಡತಕ್ಕಂಥಾದ್ದು ಸ್ವಲ್ಪ ಪ್ರಮಾಣದಲ್ಲಿ ಹೆಚ್ಚು ಹಣ ವೆಚ್ಚವಾಗುತ್ತದೆ ಎಂಬುದು ಸರ್ಕಾರದ ಗಮನದಲ್ಲಿದೆ. ಇದರಲ್ಲಿ ಮುಚ್ಚುಮರೆ ಮಾಡತಕ್ಕಂಥ ಸರ್ಕಾರಕ್ಕೆ ಏನೂ ಇಲ್ಲ. ಹೊರಗಡೆಗಿಂತ ಕಡಿಮೆ ದರದಲ್ಲಿ ಈ ಗ್ಲೂಕೋಸ್ ಘಟಕಗಳಿಂದ ಜನತೆಗೆ ಅನುಕೂಲ ಆಗುತ್ತದೆ ಎಂಬುದು ನಮ್ಮ ಗಮನಕ್ಕೆ ಬಂದ ತಕ್ಷಣವೇ ಇದನ್ನು ಪ್ರಾರಂಭ ಮಾಡಲಿಕ್ಕೆ ಸದಸ್ಯರಲ್ಲಿ ವಿನಂತಿ ಮಾಡಿದ್ದೇನೆ. ಒಂದು ಉನ್ನತ ಮಟ್ಟದ ಸಮಿತಿಯನ್ನು ಕಳುಹಿಸಿ ಅದರ ಅಗತ್ಯತೆಗಳನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಕಡಿಮೆ ದರದಲ್ಲಿ ಸರ್ಕಾರದ ವತಿಯಿಂದ ಸಿಗುತ್ತದೆ ಎಂದು ಹೇಳಿದ ಮೇಲೆ ಆ ಘಟಕಗಳನ್ನು ಸ್ಥಾಪನೆ ಮಾಡಲಿಕ್ಕೆ ಯಾವುದೇ ಅಡ್ಡಿ ಆತಂಕಗಳು ಇಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಇವತ್ತಿನ ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 17 ಇವೆ. ಆದರೆ ನಮಗೆ ಉತ್ತರ ಬಂದಿರುವುದು ಕೇವಲ 6ಕ್ಕೆ ಮಾತ್ರ. ಇದರಿಂದ ನಾವು ಸಪ್ಲಿಮೆಂಟರಿ ಕೇಳುವಂತಹ ಅವಕಾಶವೇ ಇರುವುದಿಲ್ಲ. ಇದನ್ನು ನಾವು ಸದನದಲ್ಲಿ ಈಗಾಗಲೇ ಮೂರು ಸಲ ಹೇಳಿದ್ದೇನೆ. ಇದು ನಮಗೆ ಸಮಸ್ಯೆ ಆಗಿದೆ. ನಾವು ಸಪ್ಲಿಮೆಂಟರಿ ಕೇಳುವ ಅವಕಾಶವೇ ತಪ್ಪಿದಂತೆ ಆಗಿದೆ.

ಶ್ರೀ ಕುಂಬ್ಳೆ ಸುಂದರಾವ್ : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

ಕಳ್ಳಂಬೆಳ್ಳ ಕ್ಷೇತ್ರ ಹುಳಿಯೂರಿನಲ್ಲಿ ಪ್ರಸೂತಿ ಗೃಹದಲ್ಲಿ ಮಹಿಳಾ ವೈದ್ಯಾಧಿಕಾರಿಯ ಕೊರತೆ.

95 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳ್ಳಂಬೆಳ್ಳೆ ಕ್ಷೇತ್ರ ಹುಳಿಯಾರಿನಲ್ಲಿ ಪ್ರಸೂತಿ ಗೃಹದಲ್ಲಿ ಮಹಿಳಾ ವೈದ್ಯಾಧಿಕಾರಿ ಹುದ್ದೆಗೆ ಎದುರಾಗಿ ಗುತ್ತಿಗೆದಾರ ಪುರುಷ ವೈದ್ಯಾಧಿಕಾರಿ ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ಅನೇಕ ಬಾರಿ ಶಾಸಕರಿಂದ ಇಲಾಖೆಯ ಗಮನಕ್ಕೆ ತಂದರೂ ಸಹ ಇದುವರೆಗೂ ಯಾವುದೇ ಕ್ರಮ ತೆಗೆದುಕೊಳ್ಳದೇ ಇರಲು ಕಾರಣಗಳೇನು?*

ಇ) *ತಕ್ಷಣ ಪುರುಷ ವೈದ್ಯಾಧಿಕಾರಿಗೆ ಬದಲಾಗಿ ಮಹಿಳಾ ವೈದ್ಯಾಧಿಕಾರಿ ಹಾಕಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಮಹಿಳಾ ವೈದ್ಯರ ಕೊರತೆ ಇರುವ ಕಾರಣ ಭರ್ತಿ ಮಾಡಲು ತಡವಾಗಿರುತ್ತದೆ,

ಇ) ಗುತ್ತಿಗೆ ವೈದ್ಯರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬದಲಾಯಿಸಲು ಬರುವುದಿಲ್ಲ ಆದರೂ ಸಹ ವಿಶೇಷ ಪ್ರಕರಣವೆಂದು ಪರಿಗಣಿಸಿ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯ ನಿರ್ವಹಣಾ ಧಿಕಾರಿಗಳಿಗೆ ದಿನಾಂಕ 12.8.95 ರಂದು ಪತ್ರವನ್ನು ಬರೆದು ಪುರುಷ ವೈದ್ಯರನ್ನು ಬದಲಾಯಿಸಿ ಮಹಿಳಾ ವೈದ್ಯರನ್ನು ತುಂಬುವಂತೆ ಸೂಚನೆಯನ್ನು ನೀಡಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಪ್ರಸೂತಿ ಗೃಹದಲ್ಲಿ ಮಹಿಳಾ ವೈದ್ಯಾಧಿಕಾರಿಗೆ ಎದುರಾಗಿ ಗುತ್ತಿಗೆದಾರ ಪುರುಷ ವೈದ್ಯಾಧಿಕಾರಿಯನ್ನು ಏತಕ್ಕೆ ಪೋಸ್ಟರ್ ಮಾಡಿದ್ದೀರಿ ಎಂದು ಕೇಳಿದರೆ ಮಹಿಳಾ ವೈದ್ಯರ ಕೊರತೆ ಇರುವ ಕಾರಣ ಎಂದು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದಂತದ್ದು. ತಾವು ಈ ಉತ್ತರವನ್ನು ನಂಬುವುದಕ್ಕೆ ಹೋಗಬೇಡಿ. ಈಗ ತಕ್ಷಣ ಪುರುಷ ವೈದ್ಯಾಧಿಕಾರಿಗಳ ಜಾಗಕ್ಕೆ ಮಹಿಳಾ ವೈದ್ಯಾಧಿಕಾರಿಗಳನ್ನು ಹಾಕಿಕೊಡುತ್ತೇನೆ. ಎನ್ನುವುದಕ್ಕೆ ಸೂಚನೆಯನ್ನು ಕೂಡ ಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಕೂಡ ಹೇಳಿದ್ದೀರಿ ತಾವು 12ನೇ ತಾರೀಖು ಪತ್ರ ಹೋಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ನಿನ್ನೆಯವರೆಗೂ ಆ ಸೂಚನೆ ಹೋಗಿಲ್ಲ. ನಿಮ್ಮ ಸೂಚನೆ ಜಾರಿಗೆ ಬರುತ್ತದೆ ಎನ್ನತಕ್ಕಂಥ ಖಾತರಿ ನನಗಂತೂ ಇಲ್ಲ. ಸರ್ಕಾರದಲ್ಲಿ ಏನಾಗಿದೆ ಪ್ರಸೂತಿ ಗೃಹ ಎಂದರೆ ಮಹಿಳಾ ವೈದ್ಯಾಧಿಕಾರಿಗಳನ್ನು ಹಾಕಬೇಕು ಎನ್ನತಕ್ಕಂಥ ಉದ್ದೇಶದಿಂದಲೇ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿರತಕ್ಕಂಥಾದ್ದು, ಅಲ್ಲಿ ತಪ್ಪು ಪೋಸ್ಟಿಂಗ್ ಆಗಿ ಯಾರೋ ಒಬ್ಬ ಪುರುಷನು ಹಾಕಿದಂತಹ ಸಂದರ್ಭದಲ್ಲಿ ಅದನ್ನು ಬದಲಾಯಿಸಿ ಎಂದು ಹೇಳಿ ಒಂದು ನೂರು ಅರ್ಜಿ ಕೊಟ್ಟರೂ ಕೂಡ ಇದು ನಿಮ್ಮ ಅಧಿಕಾರಿಗಳ ತಲೆಗೆ ಹೋಗದಿದ್ದರೆ ನಾನು ಏನು ಮಾಡಬೇಕು ಎಂಬುದು ಗೊತ್ತಾಗುತ್ತಿಲ್ಲ.

11.40 ಪಿ.ಎಂ

ಸರ್ಕಾರದ ಉದ್ದೇಶ ಏನು ಎಂಬುದೇ ಅರ್ಥವಾಗದೇ ಇದ್ದಮೇಲೆ ನಾನು ಏನು ಹೇಳಬೇಕು? ಸ್ವಾಮಿ, ನೀವು ಏನಾದರೂ ಮಾಡಿ, ಇವತ್ತು ಸಂಜೆ ಒಳಗಾಗಿ ಡಾಕ್ಟರನ್ನು ಹಾಕಿಕೊಡುತ್ತೇವೆ ಎಂಬ ಮಾತು ಹೇಳಿದರೆ ನನಗೆ ಭಾರಿ ಖುಷಿಯಾಗುತ್ತದೆ.

ಡಾ|| ಹೆಚ್.ಸಿ. ಮಹದೇವಪ್ಪ : ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ನಿಜವಾದ ಸಂಗತಿ. ಮಹಿಳಾ ವೈದ್ಯರ ಜಾಗಕ್ಕೆ ಪುರುಷ ವೈದ್ಯರನ್ನು ಹಾಕಿದ್ದೇವೆ. ಸರ್ಕಾರದಲ್ಲಿ ನಿರ್ದಿಷ್ಟವಾದ ಯಾವುದೇ ಕಾನೂನಿಲ್ಲ, ಪ್ರಸೂತಿಗಾಗಿ ಮಹಿಳಾ ವೈದ್ಯರನ್ನೇ ಹಾಕಬೇಕು ಎಂದು ಏಕೆಂದರೆ ಅನೇಕ ಗೈನಾಕಾಲಜಿಸ್ಟ್ ಗಂಡಸರೇ ಇದ್ದಾರೆ. ಜೊತೆಗೆ ಎಂ.ಬಿ.ಬಿ.ಎಸ್. ಮಾಡಿದ ಪದವೀಧರರು

ವಿದ್ಯಾಭ್ಯಾಸ ಮಾಡುವ ಸನ್ನಿವೇಶಗಳಲ್ಲಿ ಪ್ರಸೂತಿ ಬಗ್ಗೆ ಒಂದು ಸಬ್ಜೆಕ್ಟೇ Obstetrics & Gynaecology ಎಂದು ಅಧ್ಯಯನ ಮಾಡುತ್ತಾರೆ. ಕಳ್ಳಂಬೆಳ್ಳದ ಆಸ್ಪತ್ರೆ ಊರಿಗೂ ಸಹ ಒಬ್ಬ ಪುರುಷ ವೈದ್ಯಾಧಿಕಾರಿ ಮತ್ತು ಒಂದು ಮಹಿಳಾ ವೈದ್ಯಾಧಿಕಾರಿಗಳನ್ನು ಹೊಂದಿದೆ. ಎಂದು ನಾನು ಭಾವಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನೋಡಿ, ಅದಕ್ಕೇ ಹೇಳಿದುದು ಅವರನ್ನು ನಂಬಬೇಡಿ ಎಂದು. ಪುರುಷರಿಗಾಗಿ ಇರುವ ಆ ಪಿಎಚ್‌ಸಿ ಬೇರೆ, ನಾನು ಹೇಳುವೆ ಮೆರ್ಟನಿಟಿ ಆಸ್ಪತ್ರೆ ಬೇರೆ.

ಡಾ|| ಹೆಚ್.ಸಿ. ಮಹಾದೇವಪ್ಪ : ಈ ಬಗ್ಗೆ ಮಾನ್ಯ ಸದಸ್ಯರು ನನ್ನನ್ನೂ, ನಮ್ಮ ಕಾರ್ಯದರ್ಶಿಗಳನ್ನೂ ಕೂಡ ಭೇಟಿ ಮಾಡಿದ್ದಾರೆ. ನಾನು ಸೂಚನೆ ಕೊಟ್ಟಿದ್ದೇನೆ, ಆ ಸಂದರ್ಭದಲ್ಲಿ ಮಹಿಳಾ ವೈದ್ಯೆಯರು ಲಭ್ಯವಿರುವ ಸನ್ನಿವೇಶ ಇದ್ದುದರಿಂದ ಜನತೆಗೆ ಅನಾನುಕೂಲವಾಗಬಾರದೆಂಬ ಉದ್ದೇಶ ಇಟ್ಟುಕೊಂಡು ತಕ್ಷಣದಲ್ಲಿ ಒಬ್ಬ ಕಾಂಟ್ರಕ್ಟ ವೈದ್ಯರನ್ನು ನೇಮಕ ಮಾಡಿದ್ದೇನೆ. ಇದು ನಿಜವಾದ ಸಂಗತಿ. ಆದರೆ ಆ ಕಂಟ್ರಕ್ಟ ವೈದ್ಯರನ್ನು ವರ್ಗ ಮಾಡಲು ಬರುವುದಿಲ್ಲ. ಏಕೆಂದರೆ ಅವರಿಗೆ ಅಲ್ಲೇ ವಸತಿ ಒದಗಿಸಿ ಅವರು ಹಳ್ಳಿ ಜನರಿಗೆ ಸೇವೆ ಒದಗಿಸಬೇಕೆಂಬುದು ನಮ್ಮ ಸರ್ಕಾರದ ಉದ್ದೇಶ. ಆದರೆ ಇದೊಂದು ಪ್ರಸೂತಿ ಆಸ್ಪತ್ರೆಯಾದ್ದರಿಂದ ವಿಶೇಷ ಪ್ರಕರಣವೆಂದು ಇದನ್ನು ಪರಿಗಣಿಸಿ ಮಹಿಳಾವೈದ್ಯರ ನೇಮಕಾತಿಗೆ ತಕ್ಷಣ ನಾನು ಕ್ರಮವನ್ನು ಕೈಗೊಳ್ಳುತ್ತೇನೆಂಬ ಮಾತನ್ನು ಸದಸ್ಯರಿಗೆ ತಿಳಿಯಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಿಮ್ಮ ಸೂಚನೆ ಅಲ್ಲಿಗೆ ಹೋಗಿಲ್ಲ, ಸಾಯಂಕಾಲದೊಳಗೆ ಮಾಡಿಕೊಡುತ್ತೇನೆ ಎಂಬ ಮಾತು ಹೇಳಿದರೆ ನನಗೆ ಸಮಾಧಾನ.

Dr. H.C. MAHADEVAPPA : I will take action.

ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಹೊರ ಮತ್ತು ಒಳರೋಗಿಗಳ ಸಂಖ್ಯೆ

96 - ಶ್ರೀ ಅಶೋಕ ಕಾಟಟೆ (ಹುಬ್ಬಳ್ಳಿ ನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಪ್ರತಿ ದಿನ ಚಿಕಿತ್ಸೆ ಪಡೆಯುತ್ತಿರುವ ಹೊರ ಮತ್ತು ಒಳರೋಗಿಗಳ ಸರಾಸರಿ ಸಂಖ್ಯೆ ಎಷ್ಟು?

ಆ) ಆಸ್ಪತ್ರೆಯಲ್ಲಿ ಮಂಜೂರಾಗಿದ್ದ ವೈದ್ಯರ ಮತ್ತು ವಿವಿಧ ಸಿಬ್ಬಂದಿಗಳ ಸಂಖ್ಯೆ ಮತ್ತು ಖಾಲಿ ಇರುವ ಸ್ಥಾನಗಳ ಸಂಖ್ಯೆ ಹಾಗೂ ಅವುಗಳು ಯಾವುವು?

ಇ) ಖಾಲಿಯಿರುವ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ.ಬಿ. ಪಾಟೀಲ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ, ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಪ್ರತಿ ದಿವಸ ಚಿಕಿತ್ಸೆ ಪಡೆದಿರುವ ಹೊರ ಮತ್ತು ಒಳರೋಗಿಗಳ ವಿವರ (ಸರಾಸರಿ ಸಂಖ್ಯೆ)